ಶ್ರೀ ಯು ಟಿ ಖಾದರ್: ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ 20 ಸಾವಿರ ರೂಪಾಯಿಗಳ ಲಿಮಿಟಿ ಇದೆ. ಇದಕ್ಕೆ ಏಕೆ ಮಾಡಲಿಕ್ಕೆ ಆಗುವುದಿಲ್ಲ?

ರಾಜ್ಯದಲ್ಲಿ ಭಾಗ್ಯಲಕ್ಷ್ಮಿ ಬಾಂಡ್ ವಿತರಣೆಯ ಬಗ್ಗೆ

59(381) ಡಾ: ಬಗಲಿ ಸಾರ್ವಭೌಮ ಸಾತಗೌಡ:(ಇಂಡಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಭಾಗ್ಯಲಕ್ಷ್ಮಿ ಯೋಜನೆ ಯಾವ ಸಾಲಿನಲ್ಲಿ ಜಾರಿಗೆ ಬಂತು;

ಆ) ಇಂಡಿ ಮತ ಕ್ಷೇತ್ರದಲ್ಲಿ 2006–07ರಲ್ಲಿ ಎಷ್ಟು ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದರು, ಇದರಲ್ಲಿನ ಫಲಾನುಭವಿಗಳಿಗೆ ಬಾಂಡ್ ನೀಡಲಾಗಿದೆಯೇ;

ಇ) ಇದರಲ್ಲಿ ಎಷ್ಟು ಫಲಾನುಭವಿಗಳಿಗೆ ಬಾಂಡ್ ನೀಡಲಾಗಿಲ್ಲ; ಅದಕ್ಕೆ ಕಾರಣಗಳೇನು ಅವರಿಗೆ ಎಂದು ಬಾಂಡ್ ನೀಡಲಾಗುವುದು?

ಶ್ರೀ ಪಿ ಎಂ ನರೇಂದ್ರ ಸ್ವಾಮಿ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಅ) ರಾಜ್ಯದಲ್ಲಿ ಭಾಗ್ಯಲಕ್ಷ್ಮಿ ಯೋಜನೆಯು 2006–07ನೇ ಸಾಲಿನಿಂದ ಜಾರಿಗೆ ಬಂದಿದೆ.

ಆ) ಇಂಡಿ ಮತ ಕ್ಷೇತ್ರದಲ್ಲಿ 2006–07ನೇ ಸಾಲಿನಲ್ಲಿ ಒಟ್ಟು 2260 ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದು, ಅದರಲ್ಲಿ 1743 ಫಲಾನುಭವಿಗಳಿಗೆ ಬಾಂಡ್ ನೀಡಲಾಗಿದೆ.

ಇ) 517 ಫಲಾನುಭವಿಗಳಿಗೆ ಬಾಂಡ್ ನೀಡಲಾಗಿಲ್ಲ. ದಿನಾಂಕ:1.04.2006ರಿಂದ ಜನಿಸಿದ ಮಕ್ಕಳ ಮಾಹಿತಿಯನ್ನು ಬಿಜಾಪುರ ಜಿಲ್ಲೆಯ ಇಂಡಿ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ, ಅನೇಕ ಸಂದರ್ಭಗಳಲ್ಲಿ ಮಕ್ಕಳಿಗೆ ನಾಮಕರಣ ಅಗದೆ ಹೆಸರನ್ನು ಸೂಚಿಸದೆ ಕೇವಲ ಹೆಣ್ಣು ಮಗು ಎಂದು ಮಾಹಿತಿ ಬಂದಿದ್ದರಿಂದ, ಇಂತಹ ಸಂದರ್ಭಗಳಲ್ಲಿ ಒಂದೇ ಮಗುವಿನ ಹೆಸರು 2 ಬಾರಿ ಪುನರಾವರ್ತನೆಯಾಗಿದ್ದ ಸಂದರ್ಭದಲ್ಲಿ 2 ಬಾಂಡ್‌ಗಳು ಬಂದಿರುವ ಪ್ರಸಂಗಗಳು ಕಂಡು ಬಂದಿರುತ್ತವೆ. ಇದನ್ನು ಸರಿಪಡಿಸಲು ಮರು

ಹೊಂದಾಣಿಕೆ ಕೆಲಸ (reconciliation) ಪ್ರಗತಿಯಲ್ಲಿದ್ದು, 517 ಬಾಂಡ್‌ಗಳನ್ನು ಭಾರತೀಯ ಜೀವ ವಿಮಾ ನಿಗಮದವರು ಮುದ್ರಿಸಿ ವಿತರಿಸಲು ಕ್ರಮ ಕೈಗೊಳ್ಳುತ್ತಿದೆ.

ಡಾ: ಬಗಲಿ ಸಾರ್ವಭೌಮ ಸಾತಗೌಡ: ಮಾನ್ಯ ಅಧ್ಯಕ್ಷರೆ, LIC ಯಿಂದ ಹಣ ನೀಡಲಾಗಿದೆಯೇ, ಇಲ್ಲವೇ ಎಂಬ ಮಾಹಿತಿಯನ್ನು ಕೇಳಬಯಸುತ್ತೇನೆ.

ಶ್ರೀ ಪಿ ಎಂ ನರೇಂದ್ರಸ್ವಾಮಿ: ಈಗಾಗಲೇ ಈ ವಿಚಾರವಾಗಿ ಬಾಂಡ್‌ಗಳು ಬಂದಿಲ್ಲದಿರುವ ಪ್ರಸಂಗ ಕಂಡುಬಂದಿರುವುದರಿಂದ ಸರಿಪಡಿಸುವುದಕ್ಕೋಸ್ಕರ reconciliation ಪ್ರಗತಿಯಲ್ಲಿದೆ. 517 ಬಾಂಡ್‌ಗಳನ್ನು ಅತಿ ಶೀಘ್ರದಲ್ಲಿ ವಿತರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಡಾ: ಬಗಲಿ ಸಾರ್ವಭೌಮ ಸಾತಗೌಡ: ಸರ್ಕಾರ ಇನ್ನೂ LIC ಗೆ ಹಣವನ್ನೇ ಕೊಟ್ಟಿಲ್ಲ. ಅದಕ್ಕಾಗಿ ತಡವಾಗುತ್ತಿದೆ. ಅದಕ್ಕಾಗಿ ಸರ್ಕಾರ ಹಣ ಕೊಟ್ಟಿದೆಯೋ, ಇಲ್ಲವೋ ಎನ್ನುವ ಬಗ್ಗೆ I want specific answer.

ಶ್ರೀ ಪಿ ಎಂ ನರೇಂದ್ರಸ್ವಾಮಿ: ಹಣಕಾಸಿನ ಬಿಡುಗಡೆಗೆ ಯಾವುದೇ ತೊಂದರೆ ಇಲ್ಲ. ಆಯವ್ಯಯದಲ್ಲಿ ಹಣಕಾಸಿನ ಲಭ್ಯತೆ ಇದೆ.

ಸೇಡಂ ತಾಲ್ಲೂಕಿನಲ್ಲಿ ಆರೋಗ್ಯ ಕೇಂದ್ರಗಳ ಸ್ಥಾಪನೆಯ ಬಗ್ಗೆ

60(364) ಶ್ರೀ ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್:(ಸೇಡಂ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಡಂ ತಾಲ್ಲೂಕಿನ ರಂಜೋಳ ಮತ್ತು ಆಡಕಿ ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ ಮಾಡುವುದು ಅವಶ್ಯಕತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರಕಾರ ಕೈಕೊಂಡಿರುವ ಕ್ರಮವೇನು?

ಶ್ರೀ ಬಿ ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 2001 ರ ಜನಗಣತಿಯನ್ವಯ ಸೇಡಂ ತಾಲ್ಲೂಕಿನ ಜನಸಂಖ್ಯೆಯು 2,27,600 ಇದ್ದು. ಮಾರ್ಗಸೂಚಿಗಳನ್ವಯ 7 ಪ್ರಾಥಮಿಕ